ಅ.ನ.ಕೃ. ಭಾಷಣ ಎಂದರೆ ಸಾಕು. ಲಕ್ಷಗಟ್ಟಲೆ ಜನ ಸೇರಿಬಿಡುತ್ತ ಇದ್ದರು. ಗಂಟೆಗಟ್ಟಲೆ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸುವ ಕಲೆ ಅವರಿಗೆ ಸಿದ್ಧಿಸಿತ್ತು. ಕನ್ನಡ ಚಳವಳಿಯೇ? ಬಸವ ಜಯಂತಿಯೆ? ರಾಜ್ಯೋತ್ಸವವೆ? ಯಾವ ವಿಷಯದ ಮೇಲೆಯೂ ಅವರು ಸಲೀಸಾಗಿ ಮಾತನಾಡಲು ಸಿದ್ಧ.

ಆಮೇಲೆ ಮಹಾ ಧೈರ್ಯವಂತ. ಯಾರಿಗೂ ಹೆದರುವವರು ಅಲ್ಲ; ಸೊಪ್ಪು ಹಾಕುವವರು ಅಲ್ಲ.

ಒಂದು ಸಲ, ಮೈಸೂರಿನಲ್ಲಿ, ಒಂದು ಭಾಷಣದಲ್ಲಿ, ಅ.ನ.ಕೃ. ಹೀಗೆ ಜಾಲಾಡಿಸಿಬಿಟ್ಟಿದ್ದರು.

'ಈ ಪ್ರೊಫೆಸರುಗಳು ಯಾವಾಗಲೂ ನಮ್ಮ ಮೇಲೆ ತಪ್ಪು ಹೇಳ್ತಾನೇ ಇರ್‍ತಾರೆ. ಇವನು ಪುಟ ತುಂಬಿಸೋವವನು, ಇವನ ಕಾದಂಬರಿಯಲ್ಲಿ ಏನಿದೆ? ಬರೀ ಜೊಳ್ಳು, ಅಂತಾರೆ, ಒಂದು ಗೀಟು ಒಂದು ಸಾಲು, ಆಮೇಲೆ ಒಂದು ಗೀಟು ಒಂದು ಸಾಲು, ಮತ್ತೆ ಒಂದು ಗೀಟು ಒಂದು ಸಾಲು. ಈ ರೀತಿ, ಇವರು ಏನು ಮಾಡ್ತಾರೆ? ಏನು ಕಡಿದು ಕಟ್ಟೆ ಹಾಕ್ತಾರೆ? ಏನು ಮಾಡೋದಕ್ಕೂ ಇವರಿಗೆ ಆಗೋದಿಲ್ಲ. ಈ ಮೇಷ್ಟ್ರ ಮೇಲೆ ಆ ಮೇಷ್ಟ್ರ ಚಾಡಿ; ಆ ಮೇಷ್ಟ್ರ ಮೇಲೆ ಈ ಮೇಷ್ಟ್ರು ಚಾಡಿ; ಒಬ್ಬರು ಮಾಡಿದ ಕೆಲಸವನ್ನೇ ನಾಲ್ಕು ಜನರೂ ಮಾಡುತ್ತ, ಆ ಸಂಗ್ರಹ ಈ ಸಂಗ್ರಹ ಎಂದು ಹೆಸರಿಟ್ಟು, ಅದಕ್ಕೆ ಹೊಸದಾಗಿ ಒಂದು ಇಪ್ಪತ್ತು ಪುಟ ಅಳುಮುಂಜಿ ಮುನ್ನುಡಿ ಬರೆದು, ಭಾರೀ ಕೆಲಸ ಮಾಡಿದವರ ಹಾಗೆ ಬೀಗ್ತಾರೆ. ಇವರನ್ನು ಅವರು ಹೊಗೊಳೋದು, ಅವರನ್ನ ಇವರು ಹೊಗಳೋದು– ಇವಿಷ್ಟೇ ಇವರು ಮಾಡೋ ಕೆಲಸ. ಎಲ್ಲ ದಂಡಪಿಂಡಗಳು...'

ಅಷ್ಟು ದಿನಗಳು ಕೋಲಾಹಲ.

ಯಾವುದೋ ಕನ್ನಡ ಸಂಘದ ಒಂದು ವಿಶೇಷ ಸಂಚಿಕೆ ಅಚ್ಚಾಗಬೇಕಿತ್ತು. ಅ.ನ.ಕೃ. ನನಗೆ ಒಂದು ಕಾಗದ ಬರೆದು ಆ ಸಂಘದ ಕಾರ್ಯದರ್ಶಿಯನ್ನು ನನ್ನಲ್ಲಿಗೆ ಕಳಿಸಿಕೊಟ್ಟರು. 'ಸೊವೆನೀರ್ ಚೆನ್ನಾಗಿ ಮಾಡಿಕೊಡಿ. ಇವರು ಕನ್ನಡದ ಬಗ್ಗೆ, ಕನ್ನಡ ಸಾಹಿತಿಗಳ ಬಗ್ಗೆ ತುಂಬಾ ಅಭಿಮಾನ, ಗೌರವ ಇಟ್ಟುಕೊಂಡಿರುವವರು' ಎಂದು ಅವರು ಬರೆದಿದ್ದರು.

ಅದರ ಮುದ್ರಣ ಮುಗಿಯುತ್ತ ಇದ್ದಂತೆ ಅ.ನ.ಕೃ. ಕಾಯಿಲೆ ಬಿದ್ದು ನರ್ಸಿಂಗ್ ಹೋಂ ಸೇರಿದರು.

'ಸಾರ್, ನೀವು ಕಳಿಸಿಕೊಟ್ಟವರ ಕೆಲಸ ಸಮರ್ಪಕವಾಗಿ ಮಾಡಿಕೊಟ್ಟಿದ್ದೇನೆ. ನಿಮ್ಮಿಂದ ಸೊವೆನೀರ್ ಬಿಡುಗಡೆ ಏರ್ಪಾಡು ಮಾಡಿಕೊಂಡಿದ್ದರು. ಆದರೆ ನೀವು ಮಲಗಿಬಿಟ್ಟಿರಿ' ಎಂದೆ.

'ಏನಪ್ಪಾ ಮಾಡೋದು ಮಲಗಬೇಕಾಯ್ತು' ಎನ್ನುತ್ತ ಸ್ವಲ್ಪ ಹೊತ್ತು ಬಿಟ್ಟು ಅ.ನ.ಕೃ. 'ಒಂದು ವಿಚಾರ, ಶೇಷನಾರಾಯಣ' ಎಂದರು.

ನಾನು 'ಏನು, ಸಾರ್?' ಎಂದೆ.

'ನೋಡಿ, ಈಗ ತಾನೆ ಮಾಸ್ತಿಯವರು ಬಂದು ಹೋದರು. (ಮಾಸ್ತಿಯವರನ್ನು ಅ.ನ.ಕೃ. ಅಣ್ಣ ಎನ್ನುತ್ತ ಇದ್ದರು) ಅವರು ಏನು ಹೇಳಿದರು ಗೊತ್ತೆ? 'ಏನಪ್ಪಾ, ನೀವು ಯಾವ ಚಟವನ್ನೂ ಹಚ್ಚಿಕೊಳ್ಳದೇ ಇದ್ದರೆ, ನಿನಗೆ ಈ ಕಾಯಿಲೆ ಬರುತ್ತ ಇರಲಿಲ್ಲ. ಹಾಗೆ, ಹೀಗೆ' ಎಂದು. ಮನುಷ್ಯ ಒಂದು ದಿನ ಸಾಯಲೇಬೇಕು; ಸಾಯ್ತಾನೆ. ನಾನು ಸಾಕಷ್ಟು ಮಝಾ ಮಾಡಿದೆ ನಿಜ, ಆದರೆ ಅದರಲ್ಲಿರೋ ಸುಖ ಈ ಮುದುಕರಿಗೆ ಏನು ಗೊತ್ತು?'

ಮರಣದೊಂದಿಗೆ ಹೋರಾಡುವಾಗಲೂ ಅ.ನ.ಕೃ. ಗತ್ತು ಹೀಗೆ.

ಆಮೇಲೆ ಒಂದು ವಾರ ಕಳೆದು ಅರಕಲಗೂಡು ನರಸಿಂಹರಾವ್ ಕೃಷ್ಣರಾವ್ ದೀರ್ಘವಾಗಿ ಕಣ್ಣುಮುಚ್ಚಿಬಿಟ್ಟರು.

ಆ ದಿನ ನನ್ನ ಪ್ರೆಸ್ಸಿಗೆ ನಾನು ರಜೆಯನ್ನು ಘೋಷಿಸಿದೆ.

(ಜುಲೈ, 1999)